ಫಾರೀಖು 7ನೆ ಮಾರ್ಚ್ 1907.

ನಂಬರ್ ಕೆ. 8100—ಫಾರೆಸ್ಟ್ 211-05—9; ಸನ್ 1900ನೆ ಇಸವಿ VIIನೆ ನಂಬರು ಮೈಸೂರು ಫಾರೆಸ್ಟ್ ರೆಗ್ಯುಲೇಷನ್ 17ನೆ ಪ್ರಕರಣವನ್ನು ಅನುಸರಿಸಿ ಮೈಸೂರು ಶ್ರೀಮಂತ ಮಹಾರಾಜರವರ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ—ಈ ಇಸ್ತಿಹಾರ್ನ ಮೆಗೆ ಲಗತ್ತು ಇರುವ ಷೆಡ್ಯೂಲ್‌ನಲ್ಲಿ ಕಂಡ ಚಕ್ಕುಬಂದಿಯುಳ್ಳ ಪ್ರದೇಶವನ್ನು ಸದರಿ ಷೆಡ್ಯೂಲಿನ ಅಖೀಲು ನಮೂದಿಸಿರುವ ಹಕ್ಕುಗಳ ಚಲಾವಣೆಗೆ ಪಳಪಟ್ಟು 1907ನೆ ಇಸವಿಯು ಏಪ್ರಿಲ್ 1ನೆ ತಾರೀಖು ಆಗಾಯಿತು ಒಂದು ಸ್ಪೇಷಲ್ ಜಂಗಲಿ ಯೆಸಿಗ ಮಾಡತಕ್ಕದ್ದು.

ಷೆಡ್ಯೂಲ್ ಯೊ ಪಟ್ಟು.

ತಿನ್ನುಕಸ್ತು ಹೆಸರು	ತಾಲ್ಲೂಕು ಜೊತೆ ಗಾವುಜು ಬಳಿ ಹೆಸರು	ಸರ್ವೆ ನಂಬರು ಮತ್ತು ಫೀಲ್ಡ್ ನಂಬರು	ಚಾಕ್ಕುಬಂದಿ ಹೆಸರು	ಚಕ್ಕುಬಂದಿ.
ಹೊಸಹಳ್ಳಿ ಸಣ್ಣ ತಾಲ್ಲೂಕು ಹರಿಕೆಹಳ್ಳಿ ತಾಲ್ಲೂಕು	ಸರ್ವೆ ಜರದ ಪೈಲಿ.	ಲಕ್ಕವಳ್ಳಿ ಸ್ಟೇಟ್ ಫಾರೆಸ್ಟ್ (ಹೊಸಹಳ್ಳಿ ಬ್ಲಾಕ್)	ಉತ್ತರಕ್ಕೆ—ಹೊಸಹಳ್ಳಿ ಗ್ರಾಮದ ಸರ್ವೆ ನಂಬರು 61ರ ವಾಯವ್ಯ ಮೂಲೆಯಿಂದ ಲೈನ್ ಹೊರಟು ಪೂರ್ವ ದಿಕ್ಕಿಗೆ ಭದ್ರಾನದಿಯ ಬಲ ಪಡದಲ್ಲಿ ಉದ್ದಕ್ಕೂ ಹೋಗಿ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮದ ಎಲ್ಲೆಯಲ್ಲಿ ಸರ್ವೆ ನಂಬರು 61ರ ಈಶಾನ್ಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ—ಅಲ್ಲಿಂದಾ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಗಡಿಯಲ್ಲಿಯೇ ಹೋಗಿ ತರೀಕೆರೆ ಯಡೇಹಳ್ಳಿ ರಸ್ತೆಯಲ್ಲಿ ಹೊಸಹಳ್ಳಿ ಗ್ರಾಮದ ಸರ್ವೆ ನಂಬರು 60ರ ಆಗ್ನೇಯ ಮೂಲೆಗೆ ಸೇರಿ ಅಲ್ಲಿಂದಾ ಅದೇ ರಸ್ತೆಯಲ್ಲಿಯೆ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಗಡಿ ಬಂದಹಾಗೆ ಹೋಗಿ ತಡಸದ ಬಳಿ ಸರ್ಕಾರಿ ಹೈರೋಡ್ ಸ್ಟೇಟ್ ಫಾರೆಸ್ಟ್ ಬ್ಲಾಕಿಗೆ ತಿರುಗುವ ತಡಸದ ಗ್ರಾಮದ ಸರ್ವೆ ನಂಬರು 8ರ ದಕ್ಷಿಣ ಗಡಿಯಲ್ಲಿ ಸೇರಿ ಅಲ್ಲಿಂದಾ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟ್ ಪಶ್ಚಿಮ ಗಡಿ ಬಂದಹಾಗೆ ಸದರೀ ಫಾರೆಸ್ಟಿಗೆ ನಂದಿಗಾವೆಯಿಂದ ಹೋಗುವ ಗಾಡಿ ಜಾಡಿನ ಬಳಿ ಇರುವ ನಂದಿಗಾವೆಗ್ರಾಮದ 53-52ರ ಸರಿಹದ್ದು ಇರುವ ಮೂರು ಬಾಂಮಗಳು ಕೂಡಿ ಇರುವ ಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ—ಸದರಿ ಮೂರು ಬಾಂದಗಳು ಕೂಡುವ ಸ್ಥಳದಿಂದ ವಾಯವ್ಯವಾಗಿ ಹೊರಟು ನಂದಿಗಾವೆ ಗ್ರಾಮದ ಸರ್ವೆ ನಂಬರು 41ರ ಉತ್ತರ ಗಡಿಯಲ್ಲಿ 75 ಸರಪಳಿ ವರೆಗೆ ಹೋಗಿ ಅದರ ಈಶಾನ್ಯ ಮೂಲೆಯಿಂದ ಪಶ್ಚಿಮ ದಿಕ್ಕಿಗೆ 37 ಸರಪಳಿ ದೂರದಲ್ಲಿರುವ ಒಂದು ಸ್ಥಳವನ್ನು ಸೇರಿ ಅಲ್ಲಿಂದಾ ಉತ್ತರವಾಗಿ ಸರ್ವೆ ನಂಬರು 30ರ ಮೂಲಕ 84 ಸರಪಳಿ ದೂರ ಹೋಗಿ ಸರ್ವೆ ನಂಬರು 29ರ ಈಶಾನ್ಯ ಮೂಲೆಗೆ ಸೇರಿ ಅಲ್ಲಿಂದಾ 85 ಸರಪಳಿ ತಡಸಗ್ರಾಮದ ಸರ್ವೆ ನಂಬರು 91ರ ಉತ್ತರ ಗಡಿಯಲ್ಲಿ ಅದೇನಂಬರಿನ ಈಶಾನ್ಯ ಮೂಲೆಯಿಂದ ಪಶ್ಚಿಮವಾಗಿ 32 ಸರಪಳಿ ದೂರದಲ್ಲಿರುವ ಒಂದು ಸ್ಥಳಕ್ಕೆ ಹೋಗಿ ಅನಂತರ ಸರ್ವೆ ನಂಬರು 74ರಲ್ಲಿ ಅದರ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ 30 ಸರಪಳಿ ಬಿಟ್ಟು 37 ಸರಪಳಿದೂರ ಉತ್ತರ ದಿಕ್ಕಿನಲ್ಲಿ ಹೋಗಿ ಸೇರಿ ಅಲ್ಲಿಂದ ಸರ್ವೆ ನಂಬರು 61ರಲ್ಲಿ ಈಶಾನ್ಯ ಮೂಲೆ ಪಶ್ಚಿಮ ಭಾಗದಲ್ಲಿ 3 ಸರಪಳಿ ಬಿಟ್ಟು ಉತ್ತರವಾಗಿ 61 ಸರಪಳಿದೂರ ಹೋಗಿ ಅಲ್ಲಿಂದಾ ಸರ್ವೆ ನಂಬರು 8ರ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ 13 ಸರಪಳಿ ಬಿಟ್ಟು ಅದರ ಉತ್ತರ ಮೇರೆಯಲ್ಲಿ 40 ಸರಪಳಿ ದೂರದಲ್ಲಿ ಒಂದು ಸ್ಥಳಕ್ಕೆ ಹೋಗಿ ಅಲ್ಲಿಂದಾ ಸರ್ವೆ ನಂಬರು 50ರೊಳಗೆ 23 ಸರಪಳಿ ದೂರ ಹೋಗಿ ಹೊಸಹಳ್ಳಿ ಗ್ರಾಮದ 27-50 ಮತ್ತು ತಡಸದ 50ನೆ ನಂಬರುಗಳ ಮಧ್ಯೆ ಇರುವ ಮೂರು ಬಾಂದಗಳ ಬಳಿ ಸೇರಿ ಅಲ್ಲಿಂದಾ ಹೊಸಹಳ್ಳಿ ಗ್ರಾಮದ ನಂಬರು 50ರ ಉತ್ತರ ಗಡಿಯಲ್ಲಿ ವಾಯವ್ಯ ಮೂಲೆಯಿಂದ ಈಶಾನ್ಯವಾಗಿ 46 ಸರಪಳಿ ಬಿಟ್ಟು ಉತ್ತರವಾಗಿ 69 ಸರಪಳಿ ದೂರ ಹೋಗಿ ಅಲ್ಲಿಂದಾ ಸರ್ವೆ 52ರ ವಾಯವ್ಯ ಮೂಲೆಯಿಂದ ಆಗ್ನೇಯಕ್ಕೆ 30 ಸರಪಳಿ ಬಿಟ್ಟು ಉತ್ತರವಾಗಿ 25 ಸರಪಳಿ ವರೆಗೂ ಹೋಗಿ ಅಲ್ಲಿಂದ ಸರ್ವೆ ನಂಬರು 59ರ ನೈರುತ್ಯ ಮೂಲೆಯಿಂದ ಈಶಾನ್ಯಕ್ಕೆ 36 ಸರಪಳಿ ದೂರದಲ್ಲಿರುವ ಒಂದು ಸ್ಥಳಕ್ಕೆ ವಾಯವ್ಯವಾಗಿ 38 ಸರಪಳಿ ಹೋಗಿ ಅಲ್ಲಿಂದ ಈಶಾನ್ಯಕ್ಕೆ 58ನೆ ನಂಬರಿನಲ್ಲಿ 21 ಸರಪಳಿ ಹೋಗಿ 61ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಬಂದ ಸ್ಥಳಕ್ಕೆ ಸೇರಿ ಅಲ್ಲಿಂದಾ ಉತ್ತರಕ್ಕೆ ಸರ್ವೆ ನಂಬರು 61ರಲ್ಲಿ ಸುಮಾರು 28 ಸರಪಳಿಗಳ ದೂರ 58ನೆ ನಂಬರಿನ ಈಶಾನ್ಯ ಮೂಲೆಗೆ ಹೋಗಿ ಅಲ್ಲಿ ಭದ್ರಾನದಿ ಬಲಪಡಕ್ಕೆ ಸೇರಿ ಅಲ್ಲಿಂದ ಗಡಿಪಾರುವಾದ ಸ್ಥಳಕ್ಕೆ ಸದರಿ ನದಿ ಬಲಭಾಗದಲ್ಲೇ ಹೋಗಿ ಸೇರುತ್ತದೆ.	

ಪರಾ:—ಈ ಪ್ರದೇಶದಲ್ಲಿ ಈ ಕೆಳಗೆ ನಮೂದಾಗುವ ದಾರಿಯ ಹಕ್ಕುಗಳು ಬಿಟ್ಟುಕೊಡಲ್ಪಟ್ಟಿವೆ.

No. I. ಹೊಸಹಳ್ಳಿ ಗ್ರಾಮದ ಸರ್ವೆ ನಂಬರು 58—59—60ರಲ್ಲಿ ಹೊಸಹಳ್ಳಿಯಿಂದ ಲಕ್ಕವಳ್ಳಿಗೆ ಹೋಗುವ 15 ಅಡಿ ಅಗಲದ ಗಾಡಿ ಜಾಡು ಜನ, ಜಾನ್ವಾರು ಮತ್ತು ಗಾಡಿಗಳ ತಿರಗಾಟದ ಬಗ್ಯೆ ಸರ್ವ ಕಾಲದಲ್ಲಯೂ ಬುಲ್ಲೂ ಇಟ್ಟುರತಕ್ಕದ್ದು. ಈ ಜಾಡು ಸರ್ವೆ 59ನೆ ನಂಬರಿನ ವಾಯವ್ಯ ಮೇರೆಯಲ್ಲಿ ಅದರ ನೈರುತ್ಯ ಮೂಲೆಯಿಂದ ಈಶಾನ್ಯಕ್ಕೆ ಸುಮಾರು 36 ಸರಪಳಿಗಳ ದೂರದಲ್ಲಿ ಒಂದು ಸ್ಥಳದಿಂದ ಉತ್ತರಕ್ಕೆ 4 ಸರಪಳಿ ಬಿಟ್ಟು ಸರ್ವೆ ನಂಬರು 58ರ ಪಶ್ಚಿಮ ಗಡಿಯಲ್ಲಿ ಫಾರೆಸ್ಟಿಗೆ ಸೇರಿ ಅನಂತರ ಸರ್ವೆ ನಂಬರು 58—59ರಲ್ಲಿ ಪೂರ್ವವಾಗಿ

ಸುಮಾರು 65 ಸರಪಳಿ ಹೋಗಿ ಪುನಃ ಸರ್ವೆ ನಂಬರು 60ರಲ್ಲಿ ಆಗ್ನೇಯವಾಗಿ 50 ಸರಪಳಿ ದೂರ ಹೋಗಿ ಅನಂತರ ಸರ್ವೆ ನಂಬರು 60ರ ಆಗ್ನೇಯ ಮೂಲೆಯಲ್ಲಿ ಉತ್ತರವಾಗಿ 20 ಸರಪಳಿ ಬಿಟ್ಟು ಫಾರಸ್ಟನ್ನು ಅದರ ಪೂರ್ವ ಗಡಿಯಲ್ಲಿ ಬಿಡುತ್ತದೆ.

II. ತಲೇಕರೆಯಿಂದ ಯಡೇಹಳ್ಳಿಗೆ ಹೋಗುವ 24 ಅಡೀ ಅಗಲದ ಸುಮಾರು ಮೂರು ಸರಪಳಿ ಉದ್ದ ಇರುವ ಸರ್ಕಾರಿ ಹೈರೋಡ್–ಜನ, ಜಾನ್ವಾರ್ ಮತ್ತು ಗಾಡಿಗಳಿಗೆ ಸಾರ್ವಕಾಲದಲ್ಲಿ ಖುಲ್ಲಾ ಇರತಕ್ಕದ್ದು. ಇದು ಫಾರೆಸ್ಟ್ ಪಕ್ಕ ಮೂ ಗಡಿಯಲ್ಲಿ ಸರ್ವೆ ನಂಬರು 8ರಲ್ಲಿ ಸರ್ವೆ 61ನೆ ಉತ್ತರ ಮೇರೆಯಲ್ಲಿ ಆದರ ಈಶಾನ್ಯ ಮೂಲೆಯಿಂದ ಪ ಮುಕ್ಕೆ ಸುಮಾರು 3 ಸರಪಳಿಗಳ ದೂರದಲ್ಲಿ ಬಂದು ಸ್ಥಳದಲ್ಲಿ ಫಾರೆಸ್ಟಿಗೆ ಪ್ರವೇಶಿಸಿ ಅಲ್ಲಿಂದ ಪೂರ್ವವಾಗಿ ಸರ್ವೆ ನಂಬರು 8ರಲ್ಲಿ ಜೋಗಿ ಅನಂತರ ತಹಸಗಾವುದ ಸರ್ವೆ ನಂಬರು 8,61 ವತ್ತು ಲಕ್ಕವಳ್ಳಿ ಸ್ಟೇಟ್ ಫಾರೆಸ್ಟ್ ಇವುಗಳ ನಡುವ್ಯೆ ಇರುವ ಮೂರು ಬಾಂದು ಸೇರಿದ ಸ್ಥಳದಲ್ಲಿ ಫಾರೆಸ್ಟನ್ನು ಬಿಡುತ್ತದೆ.

2. ತಹಸಗಾವುದ ಸರ್ವೆ 91ನೆ ನಂಬರಿನಲ್ಲಿ ಕೊರವರಗುಪ್ಪದಲ್ಲಿರುವ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನಕ್ಕೆ ಹೋಗಲು, ಜನಗಳಿಗೂ ಮತ್ತು ಕಾಲ್ನಡೆಗಳಿಗೂ, 12 ಅಡಿ ಅಗಲವುಳ್ಳ 50 ಸರಪಳಿ (ಸರಪಳಿ 22 ಗಜವ ಬಾಬತ್ತು ಉತ್ತರಕ್ಕೆ ಕಲುಮುಳ್ಳು ದಾರಿ ಹಕ್ಕು ಕೊಡಲ್ಪಟ್ಟಿರುತ್ತದೆ.

ಈ ದಾರಿಯು ಇದೇ ಹೊಸಹಳ್ಳಿ ಮನ್ನಾ ಜಂಗಲಿನ ಪಶ್ಚಿಮ ಎಲ್ಲೆಯಲ್ಲಿ, ತಹಸಗಾವುದ 92ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯಿಂದ 25 ಸರಪಳಿ ದೂರದಲ್ಲಿರುವ ಸ್ಥಳದಲ್ಲಿ ಮನ್ನಾ ಜಂಗಲನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಮೇಲ್ಕಂಡ ದೇವಸ್ಥಾನಕ್ಕೆ ಹೋಗಿ ಸೇರುತ್ತದೆ.

ಷರಾ.—ಈ ದೇವಸ್ಥಾನದ ಸುತ್ತಲೂ ಬಂದು ಎಕರೆ ಅಥವಾ (4840 ಜದರ ಗಜದಷ್ಟು) ಸ್ಥಳವನ್ನು ಭಕ್ತಾದಿಗಳ ಅನುಕೂಲದ ಬಗ್ಗೆ, ದೇವಸ್ಥಾನದ ಆವರಣವೆಂದು ಗುರ್ತು ಮಾಡಿರುತ್ತದೆ.

ತಾರೀಖು 11ನೆ ಮಾರ್ಚ್ 1907.

ನಂ. ಆರ್. 8230—ಎಲ್. ಆರ್. 297-06—5, ಸ॥ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಸುಳವಳ್ಳಿ ತಾಲ್ಲೂಕು ಬ ಘನಲ್ಲಿ ಕೂಲಿ ಲೈನ್ ಯಾ ಕೂಲಿ ಜನಗಳ ಗುಡಿಸಲುಗಳನ್ನು ಬಡಾಯಿಸುವುದಕ್ಕೋಸ್ಕರ ಅವಶ್ಯಕವೆಂದಿದ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಫ್ರೆಂಚ್‌ರಾಕ್ಯ ಸಬ್ ಡಿವಿಜ್ಞಾ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹಕ್ಕು ಪಡೆಯಲು ಅಧಿಕಾರ ಕೊಟ್ಟಿದೆ.

ಡಿವಿಜ್ಞನ್	ತಾಲ್ಲೂಕು	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಮನೆ, ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
								ವಿಸ್ತೀರ್ಣ.	ಈಂದಾಯ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಸುಳವಳ್ಳಿ	ಬೆಕ್ಕಹಳ್ಳಿಗೊಂಡಹಳ್ಳಿ	ಪೆಕಕಾವಡಿ	ವಿ॥ಹೆ॥ ಕೆ॥ ಆನಂದರಾಮು ಪಿಳ್ಳೆಯರ್	371	ಮನೆ	ಎ. ಗು. 492 29	ಎ. ಗು. 47 1	...	ಕಾವೇರಿ ನದಿ ಮತ್ತು ಫಾರೆಸ್ಟ್ ಜಮೀನು	371ನೆ ಗೋವಾಳ	ಉಳಿದಬ್ಬಳ ಮತ್ತು ಕಾಡಂಕನದಳ್ಳಿ ಗ್ರಾಮ	371ನೆ ಗೋವಾಳ

ತಾರೀಖು 16ನೆ ಮಾರ್ಚ್ 1907.

ನಂ. ರೆ. 8402—ಲ್ಯಾ. ರೆ. 476-06—3. ಸ॥ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ರಥವನ್ನು ನಿಲ್ಲಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹಕ್ಕು ಪಡೆಯಲು ಅಧಿಕಾರ ಕೊಟ್ಟಿದೆ.

ಡಿವಿಜ್ಞನ್	ತಾಲ್ಲೂಕು	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರ್.	ಮನೆ, ತರಿ ಯಾ ಬಾಗಾಯಿತು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮೈಸೂರು	ಚಾಮುಂಡಿ ಬೆಟ್ಟ	ಚಾಮುಂಡಿ ಬೆಟ್ಟ	ಕಡಬದ ರಾಮಭಟ್ಟ	60	ಮನೆ (ಅದರ ದಕ್ಷಿಣಭಾಗ)	ಪೂರ್ವದಿಂದ ಪಶ್ಚಿಮಕ್ಕೆ 32 ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ 7¾ ಅಡಿಗಳು. 248 ಜದರ ಅಡಿಗಳು.	ರಸ್ತೆ	ಖಾಲಿ	ಮೂಲೀಕನ ಮನೆ	ರಸ್ತೆ